ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದೆ ಸಂಬಂಧಪಟ್ಟವರಿಂದ ಸರ್ಕಾರಕ್ಕೆ ದೂರುಗಳು ಬರಲಿ, ಬರದೇ ಇರಲಿ ಎಕ್ಸಿಕ್ಯುಟೀವ್ ಇಂಜನಿಯರ್ಸ್ ೩೦ ಕೆಲಸಗಳನ್ನು ಸಪ್ರೈಸ್ ಚೆಕ್ ಮಾಡಬೇಕು, ಸೂಪರಿಂಟೆಂಡಿಂಗ್ ಇಂಜನಿಯರ್ಸ್ ೨೦ ಕೆಲಸಗಳನ್ನು, ಚೀಫ್ ಇಂಜನಿಯರ್ಸ್ ೧೫ ಕೆಲಸಗಳನ್ನು ಸಪ್ರೈಸ್ ಆಗಿ ಚೆಕ್ ಮಾಡಿ ನಮಗೆ ಪ್ರೋಗ್ರೆಸ್ ರಿಪೋರ್ಟನ್ನು ಕಳುಹಿಸಿಕೊಡಬೇಕು ಎಂದು. ಇದಲ್ಲದೆ ನಮ್ಮ ಸ್ಯಾಚ್ಯುರೇಷನ್‌ವರೂ ಸಹ ಚೆಕ್ ಮಾಡುತ್ತಿದ್ದಾರೆ. ಇದರ ಬಗ್ಗೆ ಏನೂ ಆತಂಕ ಇಲ್ಲ ಈ ಎಲ್ಲಾ ಅಧಿಕಾರಿಗಳಿಂದ ವರದಿ ಬಂದ ಮೇಲೂ ಸಹ ಆದನ್ನು ರೀ ಚೆಕ್ ಮಾಡ ಬಹುದು. ನಾವು ಇದರ ಬಗ್ಗೆ ಸಾಕಷ್ಟು ಮುಂಜಾಗ್ರತೆ ಕ್ರಮ ತೆಗೆದುಕೊಂಡು ಯಾವ ಯಾವ ಕೆಲಸಗಳಿಗೆ ಎಷ್ಟು ಹಣ ಕೊಟ್ಟಿದ್ದೇವೆ ಆದು ಸದುಪಯೋಗವಾಗಿದೆಯೇ ಎಂದು ನೋಡುತ್ತೇವೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರವೂ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮ್ಮ ಈ ದಳದಲ್ಲಿ ಖಾಸಗಿಯವರನ್ನು ನೇಮಕ ಮಾಡಿದರೆ ಒಳ್ಳೆಯದಲ್ಲವೇ. ನಮ್ಮ ರಾಜ್ಯದಲ್ಲಿ ಈ ವಿಷಯಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ಬುದ್ಧಿವಂತರು, ದೇಶಭಕ್ತರೂ ಇದ್ದಾರೆ. ಅಂಥವರನ್ನು ಈ ದಳದಲ್ಲಿ ನೇಮಕ ಮಾಡಿದರೆ ಒಳ್ಳೆಯದಲ್ಲವೇ ? ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾವು ಇದಕ್ಕಾಗಿ ಬೇರೆ ಡಿಟೆಕ್ಟಿವ್‌ಸ್‌ನ್ನು ಕರೆಯಿಸಬೇಕಾಗಿಲ್ಲ. ನಮ್ಮ ಇಲಾಖೆಯಲ್ಲಿ ಪ್ರಾಮಾಣಿಕರಾದ ಅಧಿಕಾರಿಗಳು ಇದ್ದಾರೆ. ನಾವು ನೇಮಿಸತಕ್ಕ ಅಧಿಕಾರಿಗಳ ಬಗ್ಗೆ ಅವರ ಪೂರ್ವಪರ ಎಲ್ಲಾ ಆಲೋಚನೆ ಮಾಡಿ ಸಾಕಷ್ಟುಯೋಗ್ಯ ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ. ಇದರ ಬಗ್ಗೆ ಯಾವ ಸಂಶಯಕ್ಕೂ ಎಡೆಗೊಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಇಲಾಖೆಯ ಬಗ್ಗೆ ಮಾನ್ಯ ರಾಜಗೋಪಾಲಾಚಾರಿಯವರು, ಇದು number one enemy ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿ ಖಾಸಗಿಯವರನ್ನು ನೇಮಕ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಡಿ. ದೇವೇಗೌಡ.—ದಿವಂಗತ ರಾಜಗೋಪಾಲಚಾರಿಯವರು ಆದನ್ನು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆಯೋ ಗೊತ್ತಿಲ್ಲ ಇದು ಸರ್ವವೇದ್ಯವಾದ ಮಾತು ಎಂದು ಹೇಳಿದ್ದಾರೆ. ಆದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. ನಮ್ಮದು ಖರ್ಚು ಮಾಡುವ ಇಲಾಖೆ. ಇದರಲ್ಲಿ ಏನೇ ದೋಷವಿದ್ದರೂ ಆದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಜೆ. ಎಚ್. ಪಟೇಲ್.—ಅದೇ ಕಾಲದಲ್ಲಿ ದಿವಂಗತ ರಾಜಗೋಪಾಲಚಾರಿಯವರು 'Communist party is my enemy No. 1' ಎಂದು ಹೇಳಿದ್ದಾರೆ. ಪಬ್ಲಿಕ್ ವರ್ಕ್ಸ್‌ಗೆ ಹೇಳುವಾಗ ಈ ಕಮ್ಯುನಿಸ್ಟ್ ಪಾರ್ಟಿಯ ಬಗ್ಗೆ ಕೂಡ ಆ ರೀತಿ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ನಮ್ಮನ್ನು ಏತಕ್ಕೆ ಎಳೆದು ತಂದಿರಿ ; ನಮ್ಮನೆ ತಲೆಯ ಮೇಲೆ ಕೆಸರು ಹಾಕಿಕೊಳ್ಳುವುದಕ್ಕೆ ನೀವು ಪ್ರಯತ್ನ ಪಡುತ್ತೀರಿ :

ಶ್ರೀ ಎಚ್. ಡಿ ದೇವೇಗೌಡ.—ಆದ್ದರಿಂದ ಇದೆಲ್ಲದರ ಉದ್ದೇಶದಿಂದ ಈ ಇಲಾಖೆಯಲ್ಲಿ ಅಧಿಕಾರಿ ವಿಕೇಂದ್ರೀಕರಣ ಮಾಡತಕ್ಕಂಥಾದ್ದರಲ್ಲಿ ಮತ್ತು ಪುನರ್ ವಿಂಗಡಣೆ ಮಾಡತಕ್ಕಂಥಾದ್ದರಲ್ಲಿ ನಾವೇನು ಪಣವನ್ನು ತೊಡಗಿಸಿದ್ದೇವೆಯೋ ಆ ಹಣ ಸರಿಯಾದ ರೀತಿಯಲ್ಲಿ ಉಪಯೋಗ ಆಗುವಂತೆ ಮಾಡಲು ನಾವು ಪ್ರಯತ್ನ ನಡಸಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಮಾಗಡಿ ಜನರಲ್ ಆಸ್ಪತ್ರೆ ಕಟ್ಟಡದ ಬಗ್ಗೆ

೮೨ ಶ್ರೀ ಎಚ್. ಜಿ. ಚೆನ್ನಪ್ಪನವರು (ಮಾಗಡಿ)*.—

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಮಾಗಡಿಯ ಜನರಲ್ ಆಸ್ಪತ್ರೆಯ ಕಟ್ಟಡವು ಯಾವ ಮಟ್ಟಕ್ಕೆ ಬಂದಿದೆ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ.

(ಬ) ಸರ್ಕಾರ ಇಲ್ಲಿವರೆಗೆ ತೆಗೆದುಕೊಂಡಿರುವ ಕ್ರಮ,

(ಸ) ಕಟ್ಟಡವನ್ನು ಕಟ್ಟಲು ಅಂದಾಜು ಪಟ್ಟಿಯನ್ನು ತಯಾರುಮಾಡಲಾಗಿದೆಯೇ

ಶ್ರೀ ಪಿ.ಜಿ.ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಜ್ಯ ಸಚಿವರು).—

(ಅ) ಅಂದಾಜು ಪಟ್ಟಿಗೆ ಆಡಳಿತ ಒಪ್ಪಿಗೆಯನ್ನು ಕೊಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

(ಇ) ಹೌದು.

ರಾಜ್ಯದಲ್ಲಿ ಪೋಲೀಸ್ ಸಿಬ್ಬಂದಿ ಕೊರತೆ ಬಗ್ಗೆ

೮೩. ಶ್ರೀ ಬಿ. ಭೈರಪ್ಪಾಜಿ (ತುರುವೆಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಪೋಲೀಸ್ ಇಲಾಖೆಗೆ ಪೊಲೀಸ್ ಸಿಬ್ಬಂದಿಯನ್ನು ರಾಜ್ಯದ ಜನಸಂಖ್ಯೆಗೆ ಹೋಲಿಸಲಾಗಿ ಅವಶ್ಯವಿರುವಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಲ್ಲ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದರೆ ಪದೇ ಪದೇ ಜರುಗುತ್ತಿರುವ ಗಲಭೆ, ದೊಂಬಿ ಮುಂತಾದ ಪ್ರಕರಣಗಳನ್ನು ಹತೋಟಿಗೆ ತರಲು ಸರ್ಕಾರವು ಪೋಲೀಸ್ ಸಿಬ್ಬಂದಿಯ ಕೊರತೆಯಿಂದಾಗಿ ವಿಫಲವಾಗಿದೆ ಎಂಬುದು ವಾಸ್ತವವೇ ?

(ಇ) ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಸಿಬ್ಬಂದಿ ವರ್ಗದ ಆಯ್ಕೆಗಾಗಿ ಇರಿಸಿರುವ ವಾಡಿಕೆ ಕ್ರಮ ಗಳೇನು ?

(ಈ) ವಿವಿಧ ರಾಜ್ಯಗಳ ಆಯ್ಕೆ ನಿಯಮಾವಳಿಗಳನ್ನು ಸಮಾನ ರೂಪಕ್ಕೆ ತರಲು ಒಂದು ಆಯೋಗವನ್ನು ಕೇಂದ್ರ ಸರ್ಕಾರವು ರಚಿಸಿರುವುದು ವಾಸ್ತವವೇ ? ಹಾಗಿದ್ದರೆ, ಅಂಥ ಆಯೋಗದ ಶಿಫಾರಸ್ಸುಗಳನ್ನು ನಮ್ಮ ರಾಜ್ಯ ಸರ್ಕಾರವು ಸ್ವೀಕರಿಸಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಬಂದಿದೆ. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪೊಲೀಸ್ ದಳವನ್ನು ಹಂತ ಹಂತವಾಗಿ ಹೆಚ್ಚಿಸುವ ಕಾರ್ಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಆ) ಕಾನೂನು ಮತ್ತು ಶಿಸ್ತನ್ನು ತಹಬಂದಿಯಲ್ಲಿಡಲು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಆದರೆ ಪೋಲೀಸ್ ದಳವನ್ನು ಹೆಚ್ಚಿಸುವುದರಿಂದ ಹಾಗೂ ಹೆಚ್ಚಿನ ತರಬೇತಿ ಕೊಡುವುದರಿಂದ ಕಾನೂನು ಮತ್ತು ಶಿಸ್ತನ್ನು ಹೆಚ್ಚು ಪರಿಣಾಮಕಾರಿಯಾಗಿ ತಹಬಂದಿಗೆ ತರುವುದಕ್ಕೆ ಅನುಕೂಲವಾಗುತ್ತದೆ.

(ಇ) ೧೯೭೨ರಲ್ಲಿ ಕೇಂದ್ರ ಸರ್ಕಾರವು ತರಬೇತಿ ವಿಷಯದಲ್ಲಿ ನೇಮಕ ಮಾಡಿದ್ದ ಸಮಿತಿಯು ಪೊಲೀಸ್ ದಳಕ್ಕೆ ಸೇರಬೇಕಾದರೆ ಪೊಲೀಸ್ ಪೇದೆಯು ಎಸ್.ಎಸ್.ಎಲ್.ಸಿ./ಮೆಟ್ರಿಕ್ ಪಾಸಾಗಿರ ಬೇಕೆಂದು ಶಿಫಾರಸ್ಸು ಮಾಡಿದೆ. ರಾಷ್ಟ್ರೀಯ ಪೊಲೀಸ್ ಆಯೋಗವು ತನ್ನ ಪ್ರಥಮ ವರದಿಯಲ್ಲಿ ಒಂಭತ್ತು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶವು ಈ ಕ್ರಮವನ್ನು ಅನುಸರಿಸಿದೆ ಎಂದು ಹೇಳಿದ್ದಾರೆ.

(ಈ) ವಿವಿಧ ರಾಜ್ಯಗಳ ನಿಯಮಾವಳಿಗಳನ್ನು ಸಮಾನ ರೂಪಕ್ಕೆ ತರುವುದಕ್ಕೋಸ್ಕರವಾಗಿಯೇ ಕೇಂದ್ರ ಸರ್ಕಾರವು ಯಾವ ಆಯೋಗವನ್ನು ನೇಮಕ ಮಾಡಲಿಲ್ಲ.

ಶ್ರೀ ಭೈರಪ್ಪಾಜಿ.—ತಾವು ನನ್ನ (ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ ಪೊಲೀಸ್ ದಳವನ್ನು ಹೆಚ್ಚಿಸುವುದರಿಂದ ಹಾಗೂ ಹೆಚ್ಚಿನ ತರಬೇತಿಯನ್ನು ಕೊಡುವುದರಿಂದ ಕಾನೂನು ಮತ್ತು ಶಿಸ್ತನ್ನು ಹೆಚ್ಚು ಪರಿಣಾಮಕಾರಿಯಾಗಿ ತಹಬಂದಿಗೆ ತರುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ.